7. ಶ್ರೀ ಕೃಷ್ಣನಾಯಕ್ ಎಂಬವರಿಗೆ ಮಂಜೂರಾತಿ (ಜಿಲ್ಲಾಧಿಕಾರಿಗಳ ಸಂ : ಎಲ್‌ಎನ್‌ಡಿ : (2) ಸಿಆರ್:191:94, ದಿ: 27–10–94). 02.00 ಎಕರೆ

8. ಶ್ರೀ ಬಾಬುನಾಯಕ್ ಎಂಬವರಿಗೆ ಅಕ್ರಮಣ ಸಕ್ರಮೀಕರಿಸಿ ಮಂಜೂರಾತಿ (ತಾಲ್ಲೂಕು ನಂ:ಎನ್‌ಸಿಆರ್:ಎಸ್‌ಆರ್: (452:91–92, ದಿ: 2–10–96). 00.46 ಎಕರೆ

ಒಟ್ಟು 46.98 ಎಕರೆ

ಆ) ಸಾರ್ವಜನಿಕ ಉದ್ದೇಶಕ್ಕಾಗಿ ಕಾದಿರಿಸಲಾದ ಜಮೀನಿನಲ್ಲಿ 350 ಕುಟುಂಬಗಳು ಕಳೆದ 15–20 ವರ್ಷಗಳಿಂದ ಅಕ್ರಮವಾಗಿ ಮನೆ ಕಟ್ಟಿಕೊಂಡು ವಾಸ್ತವ್ಯವಿರುತ್ತಾರೆ.

ಇ) ಸಾರ್ವಜನಿಕ ಉದ್ದೇಶಕ್ಕಾಗಿ ಕಾದಿರಿಸಲಾದ ಜಮೀನಿನಲ್ಲಿರುವ ಅಕ್ರಮಣವನ್ನು ಸಕ್ರಮೀಕರಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ.

ಕೊಡಗು ಜಿಲ್ಲೆಯಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ

4282(4977) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರ ಪೇಟೆ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 2003–04ನೇ ಸಾಲಿಗೆ ಕೊಡಗು ಜಿಲ್ಲೆಯಲ್ಲಿ ಯಾವ ಯಾವ ಸ್ಥಳವನ್ನು ಪ್ರವಾಸೋದ್ಯಮ ಸ್ಥಳಗಳಾಗಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಮತ್ತು ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ :

ಆ) ಈ ಪೈಕಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ಯಾವ ಯಾವ ಸ್ಥಳ ಆಯ್ಕೆ ಮಾಡಲಾಗಿದೆ: (ವಿವರ ಒದಗಿಸುವುದು) :

ಇ) ಕೊಡಗು ಜಿಲ್ಲೆ ಮಡಿಕೇರಿಯ ರಾಜ ಗದ್ದುಗೆಯ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ; ಎಷ್ಟು ಹಣ ಖರ್ಚು ಮಾಡಲಾಗಿದೆ ; ಬಾಕಿ ಎಷ್ಟಿದೆ ; (ವಿವರ ಒದಗಿಸುವುದು) ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಪ್ರಸ್ತುತ ಸಾಲಿನಲ್ಲಿ ಕೊಡಗು ಜಿಲ್ಲೆಯ ಈ ಕೆಳಕಂಡ ಪ್ರಮುಖ ಪ್ರವಾಸಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು ರೂ. 817.85 ಲಕ್ಷ ವೆಚ್ಚದ ಯೋಜನೆ ತಯಾರಿಸಿ ಕೇಂದ್ರದ ನೆರವು ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ :–

ಮಡಿಕೇರಿಯ ಕೋಟೆ ಮತ್ತು ಅರಮನೆ ಪ್ರದೇಶ ; ನಾಲುಕ್ನಾಡ್ ಅರಮನೆ ; ಟಿಡಿಯಂಡಮೋಲ್ ; ರಾಜಾಸ್ ಟೂಂಬ್ಸ್ ; ರಾಜಾ ಸೀಟ್ ; ಹೊನ್ನಮ್ಮನಕೆರೆ ; ಹಾರಂಗಿ ಅಣೆಕಟ್ಟು ಪ್ರದೇಶ ; ಕಕ್ಕಬ್ಬೆ ; ಇಂತಪ್ಪ ದೇವರಬೆಟ್ಟ ; ಇರುಪು ; ಹಟ್ಟಿಹೊಳೆ ಜಲಪಾತ ಮತ್ತು ಕೋಟೆಬೆಟ್ಟ ; ಚಿಲವಾರ ಜಲಪಾತ ಮತ್ತು ಚಿಲವಾರ ಬೆಟ್ಟ ವಿರಾಜಪೇಟೆ ತಾಲ್ಲೂಕು : ಪುಷ್ಪಗಿರಿ ಬೆಟ್ಟ ; ಮಹದೇಶ್ವರ ದೇವಸ್ಥಾನ, ವಿರಾಜಪೇಟೆ ; ಕೊಡಗು ಉತ್ಸವ ; ದುಬಾರೆ ; ನಾಗರಹೊಳ ಪ್ರಕೃತಿ ಶಿಬಿರ ; ಪ್ಲಾಸ್ಟಿಕ್ ರಹಿತ ಅಂದೋಲನ.

ಇದಲ್ಲದೆ ಪ್ರಸ್ತುತ ಸಾಲಿನಲ್ಲಿ ದುಬಾರೆಯಲ್ಲಿ ಸಾಹಸ ಪ್ರವಾಸೋದ್ಯಮ ಚಟುವಟಿಕೆಗಳಿಗಾಗಿ ರೂ. 30.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಹೊನ್ನಮ್ಮನ ಕೆರೆ, ಹಾರಂಗಿ ಡ್ಯಾಂ, ಹತ್ತಿಹೊಳೆ ಫಾಲ್ಸ್, ಕೋಟೆಬೆಟ್ಟ, ಪುಷ್ಪಗಿರಿ ಬೆಟ್ಟ, ದುಬಾರೆ.

ಇ) ಇಲ್ಲ.

ಕಂದಾಯ ಜಾಗದ ಒತ್ತುವರಿ

4283 (5250) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ಅಳ್ಳಾವರದಲ್ಲಿ ಸಿಂಕೋಫಾರಂ ಜಾಗವನ್ನು ಸರ್ಕಾರ ವಶಪಡಿಸಿ ಕೊಂಡಿದೆಯೇ ; ಇದರ ವಿಸ್ತೀರ್ಣವೆಷ್ಟು :

ಆ) ಈ ಜಾಗದಲ್ಲಿ ಯಾವ ಯಾವ ಯೋಜನಾ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ;

ಇ) ಮಂಗಳೂರು ವಿ.ವಿ.ಸೈನಿಕ ಶಿಕ್ಷಣ ಶಾಲೆ ಕೆಪಿಟಿಸಿಎಲ್ ಹಾಗೂ ವಿಮಾನ ನಿಲ್ದಾಣಕ್ಕೆ ಜಾಗವನ್ನು ಮಿಸಲಿಡಲಾಗಿದೆಯೇ ; ಇಟ್ಟಿದ್ದರೆ, ಎಷ್ಟೆಷ್ಟು ಇಡಲಾಗಿದೆ ;

ಈ) ಇವುಗಳಿಗಾಗಿ ಮೀಸಲಿಟ್ಟಿರುವ ಜಾಗವನ್ನು ಆ ಭಾಗದ ರೈತರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ನಿಜವೆ ;

ಉ) ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಒತ್ತುವರಿ ಜಾಗವನ್ನು ವಶಪಡಿಸಿಕೊಳ್ಳಲಾಗಿದೆಯೇ ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಸೋಮವಾರಪೇಟೆ ತಾಲ್ಲೂಕು, ಕುಶಾಲನಗರ ಹೋಬಳಿ ಚಿಕ್ಕಳುವಾರ ಹಾಗೂ ದೊಡ್ಡಳುವಾರ ಗ್ರಾಮದಲ್ಲಿ 250 ಎಕರೆ ಜಾಗವನ್ನು ಸಿಂಪ್ಕೋ ಫಾರಂಗೆ ಗೇಣಿಯಾಗಿ ನೀಡಿದ್ದು ಗೇಣಿ ಅವಧಿ ಮುಗಿದ ನಂತರ ಗೇಣಿ ರದ್ದುಗೊಳಿಸಿ ಜಮೀನನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಆ) ಮತ್ತು ಇ) ಕೊಡಗು ಜಿಲ್ಲಾಧಿಕಾರಿಯವರ ಆದೇಶ ಸಂ: ಜಾಗ (2) 212–2001–02 ದಿನಾಂಕ: 28–3–02ರ ಮೇರೆಗೆ ಕುಶಾಲನಗರ ಹೋಬಳಿ ಚಿಕ್ಕಳುವಾರ ಮತ್ತು ದೊಡ್ಡಳುವಾರ ಗ್ರಾಮದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಪಿ.ಜಿ. ಸೆಂಟರ್ ತೆರೆಯಲು 100.00 ಎಕರೆ ಸೈನಿಕ ಶಿಕ್ಷಣ ಶಾಲೆಗಾಗಿ 100.00 ಎಕರೆ, ಕೆಪಿಟಿಸಿಎಲ್‌ಗಾಗಿ 25.00 ಎಕರೆ ಜಾಗವನ್ನು ಕಾಯ್ದಿರಿಸಲಾಗಿದೆ. ವಿಮಾನ ನಿಲ್ದಾಣಕ್ಕಾಗಿ ಜಾಗವನ್ನು ಮೀಸಲಿಟ್ಟಿರುವುದಿಲ್ಲ.

ಈ) ಹೌದು

ಉ) 30–40 ಎಕರೆ ಜಾಗವನ್ನು ವತ್ತುವರಿ ಮಾಡಿದುದರಿಂದ ವತ್ತುವರಿಯನ್ನು ನಿಯಂತ್ರಿಸಲು ಹಾಗೂ ಸೂಕ್ತ ರಕ್ಷಣೆಗಾಗಿ ಪೋಲೀಸರನ್ನು ಜಾಗದಲ್ಲಿ ಗಸ್ತು ಇಡಲಾಗಿದೆ. ಕಾಯ್ದಿರಿಸಿದ ಜಾಗದ ಗಡಿ ಗುರುತುಗಳು ಹಾಗೂ ವತ್ತುವರಿ ಮಾಡಿದ ವಿಸ್ತೀರ್ಣವನ್ನು ನಿಖರವಾಗಿ ತಿಳಿಯಲು ಸರ್ವೇಕಾರ್ಯ ಕೈಗೊಳ್ಳಲಾಗಿದೆ ಸರ್ವೆ ಕಾರ್ಯ ಮುಗಿದ ನಂತರ ವತ್ತುವರಿದಾರರನ್ನು ಜಾಗದಿಂದ ಹೊರದೂಡಲು ನಿಯಮಾನುಸಾರವಾಗಿ ಶೀಘ್ರ ಕ್ರಮ ಕೈಗೊಳ್ಳಲಾಗುವುದು.